ಹಂಸಿನಿ ರೂಮಿನ ಬಾಗಿಲು ತೆರೆದು ಬಂದಳು. ಅಷ್ಟರಲ್ಲಾಗಲೇ ಮಂಗಳಾ ತನ್ನ ಬ್ಯಾಗ್ ತೆಗೆದುಕೊಂಡು ಹೊರಟಿದ್ದಳು. ಅದೇ ಸಮಯಕ್ಕೆ ಅಮಿತಾ ಮತ್ತು ಭೂಷಣ್ ನಂದಿನಿಯನ್ನು ಕರೆದುಕೊಂಡು ಒಳಗೆ ಅಡಿಯಿಟ್ಟಿದ್ದು ನೋಡಿ ಮಂಗಳಾ ಭಯದಿಂದ ಬ್ಯಾಗ್ ಅಲ್ಲಿಯೇ ಕೆಳಗೆ ಬಿಟ್ಟಳು.

"ಎಲ್ಲಿಗೆ ಓಡುತ್ತಿರುವೆ, ಈ ಕೊಲೆ ತನಿಖೆ ಇನ್ನೂ ಮುಗಿದಿಲ್ಲ."

ಮಂಗಳಾ ಮತ್ತೆ ಬ್ಯಾಗ್ ತೆಗೆದುಕೊಂಡು, "ಈ ಮನೆಯೂ ಸಾಕು, ನಿಮ್ಮ ತನಿಖೆಯೂ ಸಾಕು... ಇವರಿಬ್ಬರ ಸಂಸಾರದ ಗುಟ್ಟು ನನ್ನ ನೆಮ್ಮದಿ ಹಾಳು ಮಾಡ್ತಿದೆ. ಬೇರೆ ಕಡೆ ಹೋಗುತ್ತೇನೆ..."

"ಬಾಳಿಗಾ ಮಾಡಿಸಿದ ಐದು ಕೋಟಿ ಇನ್ಶುರೆನ್ಸ್‌ನ ಏಜೆಂಟ್ ನೀನೆ ಅಲ್ವಾ ಮಂಗಳಾ?" ಅನಂತರಾಮಯ್ಯ ವ್ಯಂಗ್ಯವಾಗಿ ಪ್ರಶ್ನಿಸಿದ. ಅವನ ಮಾತುಗಳು ಮಂಗಳಾ ಬಗ್ಗೆಯಾದರೂ... ನೋಟ ನಂದಿನಿಯ ಮೇಲಿತ್ತು.

"ಮಾಡಿಸಿದ್ದೆ. ಅದರಲ್ಲೇನು ತಪ್ಪು? ಬಾಳಿಗಾ ಸತ್ರೆ ಹಣ ಸಿಗೋದು ನಂದಿನಿಗೆ, ನನಗಲ್ಲ. ನನಗೆ ಸಿಗೋದು ಕೇವಲ ಕಮಿಷನ್..."

"ಮದುವೆ ಆಗೋದಾದ್ರೆ ಇನ್ವೆಸ್ಟ್‌ಮೆಂಟ್ ತರಹ ಒಂದು ಪಾಲಿಸಿ ಮಾಡಿಸಬೇಕು, ಅದರ ನಾಮಿನಿ ಹಂಸಿನಿ ಆಗಿರಬೇಕು ಅಂತ ನಾನೇ ಕಂಡಿಶನ್ ಹಾಕಿದ್ದೆ. ಮಂಗಳಾ ತಾನೇ ಮಾಡಿಸುತ್ತೇನೆ, ಕಮಿಷನ್‌ನಿಂದ ಎಕ್ಸ್‌ಟ್ರಾ ಹಣ ಸಿಗುತ್ತದೆ ಅಂತ ಹೇಳಿದ್ದಳು. ಅಷ್ಟಕ್ಕೂ ಈ ಅಯೋಗ್ಯ ಇಲ್ಯಾಕೆ ಬಂದಿದ್ದಾನೆ... ಇವನೇ ಬಾಳಿಗಾ ಹತ್ರ ಸಾಲ ತೆಗೆದುಕೊಂಡು ತೀರಿಸಲಾಗದೆ ತಲೆ ಮರೆಸಿಕೊಂಡು ತಿರುಗುತ್ತಿದ್ದ. ಈಗ ಯಾಕೆ ಬಂದನಂತೆ ಕೇಳಿ..." ನಂದಿನಿಯ ಮಾತುಗಳು ಗಂಭೀರವಾಗಿದ್ದವು.

ಅನಂತರಾಮಯ್ಯ ಬೆದರಿದ. ಹೇಗಾದರೂ ಮಾಡಿ ಸಿಕ್ಕಿಸೋಣ ಎಂದು ಬಂದಿದ್ದ ಅವನು ತನ್ನ ಚಾಲಾಕಿತನ ಎಲ್ಲಿ ಬಯಲಾಗುತ್ತದೆಯೋ ಎಂದು ಹೆದರಿ, ಅಲ್ಲಿಂದ ಹೊರಡಲು ನೋಡಿದ.

"ಎಲ್ಲೂ ಹೋಗುವ ಹಾಗಿಲ್ಲ. ಈ ಕೇಸ್‌ಗೆ ನೀವೇ ಪ್ರೈಮ್ ವಿಟ್ನೆಸ್... ಮೋಟಿವ್ ಎಸ್ಟಾಬ್ಲಿಶ್ ಆಗೋದು ನಿಮ್ಮಿಂದಲೇ... ಎಲ್ಲೂ ಹೋಗುವಂತಿಲ್ಲ..."

ಅನಂತರಾಮಯ್ಯ ಮುದುಡಿ ಅಲ್ಲೇ ಇದ್ದ ಸೋಫಾ ಮೇಲೆ ಕುಳಿತುಕೊಂಡ. ಸುಖಾಸುಮ್ಮನೆ ಬಂದು ಸಿಕ್ಕಿಕೊಂಡೆ ಎನ್ನುವ ಭಾವ ಅವನಲ್ಲಿ ತುಂಬಿತ್ತು. ಅಮಿತಾ ವ್ಯಂಗ್ಯವಾದ ದನಿಯಲ್ಲಿ ಹಂಸಿನಿ ಕಡೆ ನೋಡುತ್ತಾ, "ನಿನಗೆ ಬಾಳಿಗಾ ಮೇಲೆ ಕಣ್ಣಿತ್ತು. ಅಕ್ಕನಿಗೆ ಸಿಕ್ಕ ಸುಖದ ಬಾಳು ನಿನಗೆ ಸಿಗಲಿಲ್ಲ ಅನ್ನುವ ಕೋಪ. ಸ್ವಂತ ಅಕ್ಕನ ಗಂಡನ ಮೇಲೆಯೇ ಕಣ್ಣು ಹಾಕಿದೆ. ಅದೇ ಕಾರಣಕ್ಕೆ ಜಗಳ ಆಯಿತು. ಕೋಪದಲ್ಲಿ ನಂದಿನಿ ಹಾರಿಸಿದ ಗುಂಡಿಗೆ ಬಾಳಿಗಾ ಸತ್ತರು. ನಂದಿನಿ ಜೈಲಿಗೆ ಹೋದರೆ ಇಡೀ ಐದು ಕೋಟಿ ನಿಮಗೇ ಬರುತ್ತೆ ಅಲ್ವಾ?"

"ಒಬ್ಬ ಅಂಗವಿಕಲ ಹುಡುಗಿಯ ಮೇಲೆ ಹೀಗೆ ಅಪವಾದ ಮಾಡೋದು ಸರಿಯಾ? ನಿಮಗೆ ಹೇಳಿದ್ದೆ ಅಲ್ವಾ, ಕೊಲೆ ನಾನೇ ಮಾಡಿದ್ದು ಅಂತ... ನನ್ನನ್ನ ಕರ್ಕೊಂಡು ಹೋಗಿ ಶಿಕ್ಷೆ ಕೊಡಿಸಿ. ಇಲ್ಯಾಕೆ ಮತ್ತೆಮತ್ತೆ ಬಂದು ಯಾಕೆ ಯಾಕೆ ಅಂತ ಕೆದಕುತ್ತೀರಾ... ಸುಮಾರು ಇಪ್ಪತ್ತು ಕೋಟಿ ಆಸ್ತಿ ಇರುವಾಗ ಇನ್ಶುರೆನ್ಸ್ ಹಣಕ್ಕಾಗಿ ಕೊಲೆ ಮಾಡುವುದಾ... ನಿಮಗೆ ತಲೆ ಕೆಟ್ಟಿರಬೇಕು. ಇದೆಲ್ಲಾ ಬಿಟ್ಟು ನನ್ನ ಅರೆಸ್ಟ್ ಮಾಡಿ... ಹಂಸಿನಿಯನ್ನು ಅವಳ ಪಾಡಿಗೆ ಬಿಟ್ಟುಬಿಡಿ..."

***

"ಈ ಕೇಸಿನ ಮುಂದೆ ಯಾವ ಥಿಯರಿಯೂ ವರ್ಕ್ ಆಗ್ತಿಲ್ಲ ಅಮಿತಾ..."

ಭೂಷಣ್ ತನ್ನ ಇಡೀ ಸರ್ವೀಸ್‌ನಲ್ಲಿ ಇಷ್ಟೊಂದು ಅಸಹಾಯಕತೆಯನ್ನು ಅನುಭವಿಸಿರಲಿಲ್ಲ.

"ಅನೇಕ ತನಿಖೆಗಳಲ್ಲಿ ಕೊಲೆ ಯಾಕೆ ಮಾಡಿದ್ದಾರೆ ಅನ್ನುವುದರಿಂದ ಅಪರಾಧಿ ಸಿಕ್ಕಿಕೊಳ್ಳುತ್ತಾನೆ. ಇಲ್ಲಿ ಕೊಲೆ ಯಾಕೆ ಮಾಡಿದ್ದಾರೆ ಎನ್ನುವುದಕ್ಕಿಂತ ಹೇಗೆ ಮಾಡಿದ್ದಾರೆ ಅನ್ನುವುದೇ ಮುಖ್ಯ. ನಂದಿನಿ, ಹಂಸಿನಿ, ಮಂಗಳಾ ಈ ಮೂವರು ಈ ಕೊಲೆಯ ಸಸ್ಪೆಕ್ಟ್‌ಗಳು... ನಂದಿನಿ ತಾನೇ ಕೊಲೆ ಮಾಡಿದ್ದೇನೆ ಎಂದು ಹೇಳಿದ್ದಾಳೆ ಮತ್ತು ಹೀಗೆಯೇ ಮಾಡಿದ್ದೀನಿ ಅಂತ ಹೇಳುತ್ತಿದ್ದಾಳೆ. ಆದರೆ, ಆ ಹೇಳಿಕೆಗೂ ಪೋಸ್ಟ್ ಮಾರ್ಟಂ ರಿಪೋರ್ಟ್‌ಗೂ ತಾಳೆ ಆಗುತ್ತಿಲ್ಲ.